**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ. 446/2023**

ಸಾಕ್ಷಿಯ ಹೆಸರು :- ಹರೀಶ್

ತಂದೆ/ಗಂಡನ ಹೆಸರು :- ಪುಟ್ಟಸ್ವಾಮಿ

ವಯಸ್ಸು :- 31 ವರ್ಷ

ಉದ್ಯೋಗ :- ವ್ಯವಸಾಯ

ವಾಸಸ್ಥಳ :- ಅಣ್ಣೇದೊಡ್ಡಿ

(ಸಾಕ್ಷಿಗೆ ದಿನಾಂಕಃ 25-03-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದ

ಚಾಸಾ- 1 ನನ್ನ ತಮ್ಮ, ಚಾಸಾ-3 ರಿಂದ 5 ನಮ್ಮ ಊರಿನವರು. ಆರೋಪಿ ನಮ್ಮ ಊರಿನವರು. ಜನವರಿ 27 ನೇ 2023 ರಂದು ರಾತ್ರಿ 07-00 ರಿಂದ 08-30 ರ ಅವಧಿಯಲ್ಲಿ ಕೊಪ್ಪದಿಂದ ನಮ್ಮ ಊರಿಗೆ ಬರುತ್ತಿದ್ದಾಗ, ಮಹಾಲಿಂಗ ಎಂಬುವವರ ಮನೆಯ ಮುಂದೆ ನಿಂತು ಮಾತನಾಡುತ್ತಿದ್ದಾಗ, ಆರೋಪಿಯು ಏಕಾ ಏಕಿ ಬಂದು ರಾಡಿನಲ್ಲಿ ನನ್ನ ಮೇಲೆ ಹಲ್ಲೆ ಮಾಡಿದ್ದು, ನಾನು ಕೆಳಗೆ ಬಿದ್ದಾಗ ಕಾಲಿನಿಂದ ತುಳಿದಿದ್ದು, ಈ ದಿನ ನೀನು ಬಚವಾಗಿದ್ದರೂ ನಿನ್ನನ್ನು ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಸದರಿ ವೇಳೆಯಲ್ಲಿ ಚಾಸಾ-3 ಮತ್ತು 4 ರವರು ಬಂದು ನನ್ನನ್ನು ಬಿಡಿಸಿ ಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆದರೆ ಸದರಿಯವರು ಹೆಚ್ಚಿನ ಚಿಕಿತ್ಸೆ ಬೇಕು ಎಂದಿದ್ದರಿಂದ ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಎರಡು ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದು ಬಿಡುಗಡೆ ಆಗಿರುತ್ತೇನೆ. ಅದರಂತೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ನನಗೆ ಹಲ್ಲೆ ಮಾಡಿದವರಾಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸದರಿ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಎಪಿಪಿ ರವರಿಂದ**

ನಾನು ಮತ್ತು ಚಾಸಾ-5 ರವರು ತಿಮ್ಮಯ್ಯ ಎಂಬುವವರ ಮನೆಯ ಮುಂಭಾಗ ಮಾತನಾಡುತ್ತಾ ನಿಂತಿದ್ದೆವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ತಿಮ್ಮಯ್ಯರವರ ಮಗನೇ ಮಹಾಲಿಂಗ ಎನ್ನುತ್ತಾರೆ. ಆರೋಪಿಯವರು ಈಗ ನ್ಯಾಯಾಲಯದ ಮುಂದೆಯಿರುವ ನಲ್ಲಿ ಪೈಪ್ ನಿಂದ ನಿಮಗೆ ಹಲ್ಲೆ ಮಾಡಿದ್ದರು ಎಂದರೆ ಸರಿ. ಸದರಿ ಪೈಪ್ ನ್ನು ಎಂ ಓ-1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಆರ್ ವಕೀಲರವರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಚಾಸಾ-3 ಮತ್ತು 4 ರವರು ನಿಮ್ಮ ಸಂಬಂಧಿಕರಾಗಿದ್ದು ನಿಮ್ಮ ಊರಿನವರಾಗಿದ್ದಾರೆಂದರೆ ಸಾಕ್ಷಿಯು ಊರಿನವರಾಗಿದ್ದು ನಮ್ಮ ಸಂಬಂಧಿಕರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ದೇವರ ಪೂಜೆಯಲ್ಲಿ ಅಣ್ಣತಮ್ಮಂದಿರು ಎನ್ನುತ್ತಾರೆ. ಚಾಸಾ-5 ನಮ್ಮ ಊರಿನಲ್ಲಿ ವಾಸವಿಲ್ಲ ಎಂದರೆ ಸರಿ. ನಮ್ಮ ಊರಿನಲ್ಲಿ ನನ್ನ ಮತ್ತು ಚಾಸಾ-3 ಮತ್ತು 4 ರೊಂದಿಗೆ ಆರೋಪಿಗೂ ಸುಮಾರು ವರ್ಷಗಳಿಂದ ಮಾತುಕತೆ ಇಲ್ಲ ಎಂದರೆ ಸರಿ. ಆರೋಪಿಯು ನಮ್ಮ ಊರಿನ ಸೊಸೈಟಿ ನಲ್ಲಿ ಅಧ್ಯಕ್ಷರಾಗಿದ್ದರು ಎಂದರೆ ಸರಿ. ನಮ್ಮ ಊರಿನ ಚಿಕ್ಕಮಲ್ಲಯ್ಯ ಎಂಬುವವರು ಕೂಡಾ ಸದರಿ ಸೊಸೈಟಿ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಚಿಕ್ಕಮಲ್ಲಯ್ಯ ನನ್ನ ದೊಡ್ಡಪ್ಪ ಎನ್ನುತ್ತಾರೆ. ನಾನು ಮತ್ತು ಆರೋಪಿಯವರು ರಾಜಕೀಯವಾಗಿ ಬೇರೆ ಬೇರೆ ಪಕ್ಷದವರು ಎಂದರೆ ಸರಿಯಲ್ಲ.

ಗಲಾಟೆಯು ಸುಮಾರು 15-30 ನಿಮಿಷದವರೆಗೆ ಆಗಿದೆ. ಗಲಾಟೆಯಲ್ಲಿ ಎಷ್ಟು ಜನ ಸೇರಿದ್ದರು ಎಂದು ನಿಖರವಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 7-8 ಜನ ಸೇರಿದ್ದಿರಬಹುದು ಆದರೆ ತಲೆಗೆ ಏಟಾಗಿದ್ದರಿಂದ ನನಗೆ ಗೊತ್ತಿಲ್ಲ. ತಿಮ್ಮಯ್ಯರವರ ಮನೆಯು ವಾಸದ ಮನೆಯಾಗಿದೆ. ಸದರಿ ತಿಮ್ಮಯ್ಯರವರ ಮನೆಯ ಅಕ್ಕಪಕ್ಕದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಚಾಸಾ-3 ಮತ್ತು 4 ರವರ ಮನೆಗಳು ತಿಮ್ಮಯ್ಯರವರ ಮನೆಯ ಅಕ್ಕಪಕ್ಕದಲ್ಲಿದೆ. ತಿಮ್ಮಯ್ಯ ಮತ್ತು ಆರೋಪಿಗಳ ಮನೆಯ ನಡುವೆ ಸುಮಾರು 50-100 ಮೀಟರ್ ಅಂತರವಿದೆ. ಎಂ ಓ-1 ಅಲ್ಲಿಯೇ ನಲ್ಲಿ ಕೆಲಸ ಮಾಡಿ ಬಿಟ್ಟು ಹೋಗಿದ್ದರಿಂದ ತೆಗೆದುಕೊಂಡು ಹೊಡೆದಿರುತ್ತಾರೆ. ಸದರಿ ಎಂ ಓ-1 ರ ಹಲ್ಲೆಯಿಂದ ರಕ್ತಗಾಯವಾಗಿತ್ತು. ಸದರಿ ರಕ್ತವು ಬಟ್ಟೆ ಮತ್ತು ನೆಲಕ್ಕೆ ಬಿದ್ದಿತ್ತು. ಸದರಿ ರಕ್ತದ ಬಟ್ಟೆಯನ್ನು ಪೊಲೀಸರಿಗೆ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಎನ್ನುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡುವಾಗ, ಬಟ್ಟೆಗೆ ರಕ್ತವಾಗಿತ್ತು ಎಂದು ಹೇಳಿದ್ದೇನೆ. ಸದರಿ ವೇಳೆಯಲ್ಲಿ ರಕ್ತವಾಗಿದ್ದ ಬಟ್ಟೆಯನ್ನು ಕೊಡಲು ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಆದರೆ ನಾನು ಆರಾಮ ಇರಲಿಲ್ಲ ಎನ್ನುತ್ತಾರೆ . ಚಾಸಾ-3 ಮತ್ತು 4 ರವರು ಗಲಾಟೆಯಾದ 10-15 ನಿಮಿಷಕ್ಕೆ ಬಂದಿರುತ್ತಾರೆ. ನಾನು ಹೇಳಿಕೆಯನ್ನು ಮರದಿನ ನೀಡಿರುತ್ತೇನೆ. ನಾನು ಸದರಿ ಹೇಳಿಕೆಯಲ್ಲಿ ಎರಡು ದಿನಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದನ್ನು ಹೇಳಿದ್ದೇನೆ. ನಾನು ಆಸ್ಪತ್ರೆಯಲ್ಲಿ ಎರಡು ದಿನಗಳ ಕಾಲ ದಾಖಲಾಗಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಗಲಾಟೆಯಾಗಿಲ್ಲದಿದ್ದರೂ ಬಿದ್ದು ಗಾಯಮಾಡಿಕೊಂಡಿರುವುದನ್ನು ದುರುಪಯೋಗಪಡಿಸಿಕೊಂಡು ಚಾಸಾ-1 ರವರ

ಮೂಲಕ ಸುಳ್ಳು ದೂರು ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿಯು ನಾನು ಮಾತನಾಡುತ್ತಾ ನಿಂತಿದ್ದಾಗ ಏಕಾ ಏಕಿ ಬಂದು ಎಂ ಓ-1 ರಿಂದ ನನ್ನನ್ನು ಹಲ್ಲೆ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಕಾಲಿನಿಂದ ಒದ್ದಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರು ಮತ್ತು ಕೊಪ್ಪ ನಡುವೆ 5 ಕಿಲೋಮೀಟರ್ ಅಂತರವಿದೆ. ನಾನು ವೈದ್ಯರಿಗೆ ಹಲ್ಲೆ ಮಾಡಿರುವ ವಿಚಾರವನ್ನು ಹೇಳಿದ್ದು ಆದರೆ ಯಾರು ಏಕೆ ಹೇಗೆ ಎಂದು ಹೇಳಿದ್ದೇನೋ ಇಲ್ಲವೋ ಎಂದು ನೆನಪಿಲ್ಲ. ಆರೋಪಿಗೆ ತೊಂದರೆ ಕೊಡಬೇಕೆಂದು ನನಗೆ ಯಾವುದೇ ಹಲ್ಲೆ ಆಗಿಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮದ್ದೂರು